ಉತ್ತರ ಇದೆ. ಏಕೆಂದರೆ ಈಗನವುಗೆ ತಕ್ಷಣ ನೀರಿನವ್ಯವಸ್ಥೆ ಮಾಡುವುದಕ್ಕೆ ಏನಾದರೂ short-term measures, whether the Government has taken in this regard to meet the situation in the town's drinking water supply?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಕುಣಿಗಲ್ ನಗರದ ಪುರಸಭೆಯ ಒಟ್ಟು ಜನಸಂಖ್ಯೆ ಸುಮಾರು ೨೧ ಸಾವಿರ ಎಂದು ತಿಳಿದು ಬಂದಿದೆ. ಅಲ್ಲಿ ನೀರಿನ ಸಮಸ್ಯೆ ಇದೆಯೆಂತಲೂ ಸರ್ಕಾರಕ್ಕೆ ಅರ್ಥವಾಗಿದೆ. ಬಹುಶಃ ಮಾನ್ಯ ಸದಸ್ಯರು ಏನಾ ಬಯಕೆಯನ್ನು ಅದು ಜಾಗ್ರತೆ ಆಗಬೇಕು ಎಂದು ವ್ಯಕ್ತಪಡಿಸುತ್ತಾ ಇದ್ದಾರೆ. ಅದನ್ನು ಸರ್ಕಾರದ ಆರ್ಥಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಜಾಗ್ರತೆ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ, ಆದರ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ ಎಂದು ನಿಮ್ಮ ಮುಂಖಾಂತರ ಮಾನ್ಯ ಸದಸ್ಯರಿಗೆ ನಾನು ತಿಳಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ತಮ್ಮ ಉತ್ತರದಲ್ಲಿ ಮಾರ್ಕೋನಹಳ್ಳಿ ರಿಸರ್ವಾಯರ್‌ನಿಂದ ನೀರನ್ನು ಈ ಪಟ್ಟಣಕ್ಕೆ ಒದಗಿಸಬೇಕಾಗಿದ್ದರೆ ೩೬೦ ಲಕ್ಷ ರೂಪಾಯಿಬೇಕು ಎಂದು ಹೇಳಿದ್ದೀರಿ. ಈ ಅಂದಾಜು ಯಾವಾಗ ತಯಾರಾಗಿದೆ. ಯಾವಾಗ ಇಂಪ್ಲಿಮೆಂಟ್ ಮಾಡುತ್ತೀರಿ. ಈಗಾಗಲೇ ಬಂದು ಲಕ್ಷ ರೂಪಾಯಿನಷ್ಟು ರಿಲೀಸ್ ಮಾಡಿದ್ದಾರೆ. ೨-೩ ಬೋರ್ವೆಲ್‌ಗಳನ್ನು ತೆಗೆಸಿದ್ದೇವೆ.

ಇದರ ಜೊತೆಗೆ ಒಂದು ಕೋಟಿ ರೂಪಾಯಿ ಯೋಜನೆ ಮಾಡುತ್ತೇವೆ ಎಂದು ನಿಮ್ಮ ಕಮಿಷನರ್ ಅನ್ನು ನಾನು ಫೋನ್ ಮಾಡಿದಾಗ ಹೇಳಿದ್ದಾರೆ. ಆದುದರಿಂದ ಈ ಬಗ್ಗೆ ತಕ್ಷಣ ಏನಾದರೂ ಮತ್ತೆ ಬೋರ್ವೆಲ್‌ಗಳನ್ನು ಹಾಕುವುದಕ್ಕೆ ಸ್ವಲ್ಪ ಹಣವನ್ನು ತಾವು ರಿಲೀಸ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಸಮಗ್ರ ಯೋಜನೆಯನ್ನು ನಂತರ ಕೈಗೊಳ್ಳಲಾಗುತ್ತದೆ ಆದರೆ ಬೋರ್ವೆಲ್ ಕಾರ್ಯಕ್ರಮ ಏನಿದೆ, ಅದಕ್ಕೆ ಎಷ್ಟು ಬೇಡಿಕೆ ಇದೆ ಎಂಬುದನ್ನು ಅವರು ಸದನದ ಹೊರಗಡೆನೂ ಕೂಡ ನನಗೆ ತಿಳಿಸುವುದಾದರೆ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳುತ್ತೇನೆ ಎಂದು ಅವರಿಗೆ ಆಶ್ವಾಸನೆ ಕೊಡುತ್ತಾ ಇದ್ದೇನೆ.

(ಪ್ರಶ್ನೆ ಸಂಖ್ಯೆ ೧೫೯ (೬೨೮).—ಮಾನ್ಯ ಸದಸ್ಯರು ಗೈರುಹಾಜರು)

ರಾಜ್ಯದ ಪೌರಕಾರ್ಮಿಕರ ಬಗ್ಗೆ

೪೩೫. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಬಂದರು, ಮೂಲಸೌಕರ್ಯ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ರಾಜ್ಯದಲ್ಲಿರುವ ಒಟ್ಟು ಪೌರ ಕಾರ್ಮಿಕರ ಸಂಖ್ಯೆ ಎಷ್ಟು?

೨) ಇದರಲ್ಲಿ ಎಷ್ಟು ಜನರಿಗೆ ವಸತಿ ಸೌಕರ್ಯ ಒದಗಿಸಲಾಗಿದೆ?

೩) ವಸತಿ ಸೌಕರ್ಯ ಇಲ್ಲದ ಪೌರ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ೧೬,೬೬೮.

೨) ೪,೨೪೬

೩) ರಾಜ್ಯದ ವಿವಿಧ ಮಹಾನಗರಪಾಲಿಕೆ, ನಗರಸಭೆ ಹಾಗೂ ಪುರಸಭೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಏರ್ಪಡಿಸುವುದೇ ಆಯಾಯ ನಗರಪಾಲಿಕೆ ಪುರಸಭೆಗಳು ಹೇಳ್ಕಿನ ಕಾರ್ಯಜಾರಿಸುತ್ತಿವೆ ಮೈಸೂರು ಮಹಾನಗರಪಾಲಿಕೆಯು ನಗರಾಭಿವೃದ್ಧಿ ಪ್ರಾಧಿಕಾರದಿಂದ ಜಮೀನು ಪಡೆದು ವಸತಿ ಗೃಹಗಳನ್ನು ಕಟ್ಟಲು ಪರಿಶೀಲಿಸುತ್ತಿದೆ. ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಪಡೆದವರಿಗೆ ಮುಂಗಡ ಹಣ ಕೊಡಲಾಗುತ್ತಿದೆ. ಅಲ್ಲದೇ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಟ್ಟುತ್ತಿರುವ ಇಡಬ್ಲ್ಯೂಎಸ್ ಮನೆಗಳ ಪೈಕಿ ಕೆಲವನ್ನು ಪೌರಕಾರ್ಮಿಕರಿಗೆ ಅಲಾಟ್ ಮಾಡುವ ವಿಚಾರವು ಪರಿಶೀಲನೆಯಲ್ಲಿದೆ. ಬೆಂಗಳೂರು ಮಹಾನಗರ

ಪಾಲಿಕೆಯಲ್ಲಿ ಕೂಡ ನೆಹರೂಪುರಂ ಬಡಾವಣೆಯಲ್ಲಿ ಒಂದ ಬಹುಅಂತಸ್ತಿನ ಕಟ್ಟಡವನ್ನು ಕಟ್ಟಲಾಗು ತ್ತದೆ, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯಲ್ಲಿ ಕಾರ್ಮಿಕರ ವಸತಿಗಾಗಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೆಳಗಾಂ ಮಹಾನಗರ ಪಾಲಿಕೆಯು ಈ ಸಾಲಿನ ಬಜೆಟ್ಟಿನಲ್ಲಿ ೧೦,೦೦,೦೦೦ ರೂಪಾಯಿಗಳನ್ನು ಕಾರ್ಮಿಕರ ವಸತಿಗಾಗಿ ಇಟ್ಟಿದೆ. ಮಂಗಳೂರಿನಲ್ಲಿ ೭೭ ಜನರಿಗೆ ಸಾಲ ಹಾಗೂ ಅನುದಾನವನ್ನು ಕೊಡಲಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ರಾಜ್ಯದಲ್ಲಿ ಸ ಮಾರು ೧೬ ಸಾವಿರಕ್ಕೂ ಹೆಚ್ಚು ಪೌರಕಾರ್ಮಿಕರಿದ್ದಾರೆ ಅವರಲ್ಲಿ ೪ ಸಾವಿರ ಜನರಿಗೆ ಮಾತ್ರ ವಸತಿ ಇರತಕ್ಕಂಥಾದ್ದು, ಉಳಿದ ೧೨ ಸಾವಿರ ಜನರಿಗೆ ವಸತಿಗಳಿಲ್ಲ ಎನ್ನತಕ್ಕಂಥ ಒಂದು ಅಂಶವನ್ನು ಸದನಕ್ಕೆ ತಿಳಿಸಿದ್ದಾರೆ. ನಾನಾದರೂ ಮಾನ್ಯ ಸಚಿವರಲ್ಲಿ ಕೇಳಲಿಕ್ಕೆ ಬಯಸತಕ್ಕಂಥಾದ್ದು ಏನೆಂದರೆ, ಈ ವರ್ಷದಲ್ಲಿ ಎಷ್ಟು ಮನೆಗಳನ್ನು ಕಟ್ಟುವವರಿದ್ದೀರಿ ಇದು ಮೊದಲನೆ ಪ್ರಶ್ನೆ ಎರಡನೆಯದು, ತಮ್ಮ ಗಮನಕ್ಕೆ ನಾನು ತರಲಿಕ್ಕೆ ಬಯಸುತ್ತೇನೆ, ಈ ಸ್ಪೆಷಲ್ ಕಾಂಪೊನೇಂಟ್ ಪ್ರೋಗ್ರಾಂ ಆಶ್ರಯದಲ್ಲಿ ಪೌರ ಕಾರ್ಮಿಕರಿಗೆ ಮನೆಗಳನ್ನು ಕಟ್ಟಲಿಕ್ಕೆ ಒಂದು ವಿಶೇಷವಾದ ಯೋಜನೆ ಇದೆ. ಈ ಯೋಜನೆ ನನ್ನ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ತಿಳಿದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ, ಪುರಸಭೆಗಳಿಗೆ ಮತ್ತು ನಗರಸಭೆಗಳಿಗಂತೂ ಅದು ಗೊತ್ತೇ ಇಲ್ಲ ಈ ಯೋಜನೆಯ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಕಳಿಸುವುದಾದರೆ ಸಾಕಷ್ಟು ಹಣವನ್ನು ನಾವು ಪಡೆಯಬಹುದು. ಇದು ನನಗೂ ಗೊತ್ತಿರಲಿಲ್ಲ. ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದನ್ನು ರಿವ್ಯೂ ಮಾಡತಕ್ಕಂಥ ಸಂದರ್ಭದಲ್ಲಿ ಇದು ನನ್ನ ಗಮನಕ್ಕೆ ಬಂತು. ಸರ್ಕಾರ ಮನಸ್ಸು ಮಾಡಿದರೆ, ಒಂದು ವರ್ಷದಲ್ಲಿ ಕನಿಷ್ಟಪಕ್ಷ ೫,೦೦೦ ಪೌರಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡಬಹುದು. ಆ ರೀತಿಯ ಯೋಜನೆ ಕಳಸಲಿಕ್ಕೆ ಸಾಧ್ಯವೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರು ಅತ್ಯುತ್ತಮವಾದ ಸಲಹೆ ನೀಡಿದ್ದಾರೆ, ಅವರ ಸಲಹೆಯನ್ನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ —ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಪರಿಶೀಲನೆ, ಪ್ರಾಮಾಣಿಕ ಪ್ರಯತ್ನ ಎಂಬುದನ್ನೆಲ್ಲಾ ಸದನದ ಹೊರಗಡೆ ಕೊಡತಕ್ಕಂಥಾದ್ದು. ೧೨ಸಾವಿರ ಪೌರ ಕಾರ್ಮಿಕರಿಗೆ ಮನೆಗಳು ಇಲ್ಲ ಅಂದಮೇಲೆ ಅವರ ಸ್ಥಿತಿ ಚಿಂತಾಜನಕವಾಗಿದೆ. ಈ ವರ್ಷದಲ್ಲಿ ೨೦-೩೦ ಮನೆ ಕಟ್ಟಿಸುತ್ತೀರಾ, ೧೦೦೦ ಮನೆ ಕಟ್ಟಿಸುತ್ತೀರಾ ಎಂಬುದನ್ನು ಖಚಿತವಾಗಿ ತಾವು ತಿಳಿಸಬೇಕು?

ಶ್ರೀ ಟಿ. ಎನ್. ನರಸಿಂಹಮೂರ್ತಿ —ಮಾನ್ಯ ಅಧ್ಯಕ್ಷರೆ, ಸರ್ಕಾರದಲ್ಲಿ ಪೌರ ಕಾರ್ಮಿಕರಿಗೆ ಮನೆ ಕಟ್ಟಿಸಿಕೊಡುವಂಥ ನಿರ್ದಿಷ್ಟವಾದ ನಮ್ಮಲ್ಲಿ ಯೋಜನೆ ಇಲ್ಲ. ವಿಶೇಷ ಘಟಕ ಯೋಜನೆಯಲ್ಲಿ ಪೌರಕಾರ್ಮಿಕರಿಗೆ ಮನೆ ಕಟ್ಟಿಸಿಕೊಡತಕ್ಕ ಯೋಜನೆ ಇದ್ದು ಅದಕ್ಕೆ ಕೇಂದ್ರದವರು ಹಣ ಕೊಡ ತ್ತಾರೆಂದು ಹೇಳಿದ್ದಾರೆ. ಸರ್ಕಾರ ೧೯೯೦-೯೧ನೇ ಇಸವಿಯಲ್ಲಿ ನೆಹರೂ ರೋಜ್‌ಗಾರ್ ಯೋಜನೆ ಮತ್ತು ವಿಶೇಷ ಘಟಕ ಯೋಜನೆಯಲ್ಲಿ ಈ ಒಂದು ವರ್ಗದವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಆದರೆ ನಮಗೆ ಬಂದಿರತಕ್ಕ ತೊಂದರೆ ಅಂದರೆ ಜಾಗದ ತೊಂದರೆ, ಆದರೂ ತಮ್ಮ ಮನಸ್ಸಿಗೆ ನೋವಾಗದಿದ್ದರೆ ಒಂದು ಮಾತನ್ನು ಹೇಳಂತ್ತೇನೆ. ಏನೆಂದರೆ ನಿಮ್ಮ ಸರ್ಕಾರ ಕ್ಕಿಂತಲ್ಲೂ ಹೆಚ್ಚಿನ ಕಳಕಳಿಯಿಂದ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ವಾಮಿ, ನನಗೂ ಈ ವಿಚಾರ ಮೊದಲು ಗೊತ್ತಿರಲ್ಲಿಲ್ಲ. ನಾನು ಸಮಾಜ ಕಲ್ಯಾಣ ಮಂತ್ರಿಯಾಗಿದ್ದಾಗ ಪುರಸಭೆಗಳನ್ನ ಮತ್ತು ಮುನಿಸಿಪಾಲಿಟಿಗಳನ್ನು ರಿವ್ಯೂ ಮಾಡಿದ್ದೇನೆ. ಅಲ್ಲೆಲ್ಲಾ ಜಾಗ ಇದೆ. ಆದ್ದರಿಂದ ಈ ಬಗ್ಗೆ ಒಂದು ಯೋಜನೆ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ, ಅವರು ಹಣ ಕೊಡುತ್ತಾರೆಂದು ನಾನು ಹೇಳಿದ್ದು. ಈ ವರ್ಷದಲ್ಲಿ ಕಟ್ಟುವುದಕ್ಕಾಗುವುದಿಲ್ಲ ಎನ್ನುವುದು ನನಗೂ ಗೊತ್ತಿದೆ. ಬಜೆಟ್‌ನಲ್ಲಿ ದುಡ್ಡಿಲ್ಲ ಮುಂದಿನ ಬಜೆಟ್‌ನಲ್ಲಿ ತಾವು ಇದಕ್ಕೆ ದುಡ್ಡು ಇಡತಕ್ಕ ಪ್ರಯತ್ನವನ್ನು ಮಾಡಬೇಕಾಗುತ್ತದೆ ಮುಖ್ಯವಾಗಿ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯನ್ನು ತಯಾರಿಸಿ ಕಳುಹಿಸಿಕೊಡುತ್ತೇವೆನ್ನುವ ಉತ್ತರ ನನಗೆ ಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಕೇಂದ್ರಕ್ಕೆ ಯೋಜನೆ ಕಳುಹಿಸಿಕೊಡಲಾಗುವುದು. ಇದೊಂದು ಒಳ್ಳೆಯ ಸಲಹೆ ಎಂದು ನಾನು ಮೊದಲೇ ಹೇಳಿದ್ದೇನೆ.

ಶ್ರೀ ಎಂ. ಮಹದೇವ್ — ಮಾನ್ಯ ಅಧ್ಯಕ್ಷರೇ ಪೌರಕಾರ್ಮಿಕರು ಏನಿದ್ದಾರೆ, ಅವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಂದುಳಿದಿರುವಂಥ ಜನ. ಇವತ್ತು ಇವರು ಬಹಳ ಹೀನಾಯವಾದಂಥ ಪರಿಸ್ಥಿತಿಯಲ್ಲಿ ಗುಂಡಿಸಲುಗಳಲ್ಲಿ ವಾಸವಾಗಿ ಇದ್ದಾರೆ. ಅಲ್ಲಿ ಬೇಸಿಗೆ ಕಾಲ,

ಮಳೆಗಾಲ, ಚಳಿಗಾಲದಲ್ಲೂ ಕೂಡ ಮಲಗುವುದಕ್ಕಾಗುವುದಿಲ್ಲ. ಅವರ ಸ್ಥಿತಿ ಚಿಂತಾಜನಕವಾಗಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುವುದೇನೆಂದರೆ' ಎಲ್ಲಕ್ಕಿಂತ ಹೆಚ್ಚಿನ ಆದ್ಯತೆ ಪೌರ ಕಾರ್ಮಿಕರ ವಸತಿ ಕಟ್ಟುವುದಕ್ಕೆ ಕೊಟ್ಟು ಮಾಡಲು ಸರ್ಕಾರ ಪ್ರಯತ್ನ ಮಾಡುವುದೆ ಎಂದು ನಾನು ಕೇಳಂತ್ತಿದ್ದೇನೆ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸಮಾಜದಲ್ಲಿ ನೊಂದಿರತಕ್ಕ ವರ್ಗದವರ ಪೈಕಿ ಇವರು ಬಹಳ ನೊಂದಿದ್ದಾರೆಂಬುದು ಸರ್ಕಾರಕ್ಕೂ ಗೊತ್ತಾಗಿದೆ. ಈ ಬಗ್ಗೆ ಮಾನ್ಯ ಸಿಂಧ್ಯ ಅವರು ಮತ್ತು ಮಾನ್ಯ ಮಹದೇವ್‌ರವರು ಆದರ್ಶವಾದಂಥ ಸಲಹೆ ಕೊಟ್ಟಿದ್ದಾರೆ. ಆ ದಿಕ್ಕಿನಲ್ಲಿ ಸರ್ಕಾರ ಹೆಜ್ಜೆಯನ್ನಿಡುತ್ತದೆಂದು ಹೇಳುತ್ತೇನೆ.

ಶ್ರೀ ಕರಿಯಣ್ಣ.—ಸ್ವಾಮಿ, ಈ ಪೌರಕಾರ್ಮಿಕರು ಸಮಾಜದಲ್ಲಿ ಯಾರೂ ಮುಟ್ಟದೇ ಇರತಕ್ಕ ಒಂದು ಕೊಳಚೆಯನ್ನು ಶುದ್ಧ ಮಾಡತಕ್ಕವರಾಗಿದ್ದಾರೆ. ಆದ್ದರಿಂದ ಇವರಿಗೆ ಪುಕ್ಕಟೆಯಾಗಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅಸ್ತಿತ್ವದಲ್ಲಿ ಈಗ ಕೆಲವು ನಿಯಮಗಳಿವೆ. ಈಗಿರತಕ್ಕ ನಿಯಮಾವಳಿಗೆ ಕೆಲವು ತಿದ್ದುಪಡಿಗಳ ಅಗತ್ಯ ಇದ್ದರೆ, ಅದನ್ನು ಸಹ ಸರ್ಕಾರ ಪರಿಶೀಲನೆಮಾಡುತ್ತದೆ.

ಕಾವೇರಿ ನದಿ ನೀರು ಒದಗಿಸುವ ಬಗ್ಗೆ

೬೦೦. ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಕೋಲಾರ ಮತ್ತು ಬೆಂಗಳೂರು ಜಿಲ್ಲೆಯ ಕೆಲವು ಪಟ್ಟಣಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರು ಒದಗಿಸಬೇಕೆಂಬ ಬೇಡಿಕೆಯೇನಾದರೂ ಸರ್ಕಾರಕ್ಕೆ ಬಂದಿದೆಯೇ ?

೨) ಹಾಗಿದ್ದಲ್ಲಿ ಆ ಪಟ್ಟಣಗಳು ಯಾವುವು ಮತ್ತು ಸರ್ಕಾರ ಕೈಗೊಂಡಿರುವ ಕ್ರಮವೇನು ?

೩) ಈ ವಿಷಯದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಂದಾಜನ್ನು ಸಿದ್ಧ ಪಡಿಸಿರುವುದು ನಿಜವೇ ?

೪) ಹಾಗಿದ್ದಲ್ಲಿ ಅಂದಾಜಿನ ಮೊತ್ತವೆಷ್ಟು ?

೫) ಈ ಯೋಜನೆಯನ್ನು ತೆಗೆದುಕೊಳ್ಳುವ ಉದ್ದೇಶವಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಬಂದಿದೆ.

೨) ೧) ಕನಕಪುರ ೨) ಹಾರೋಹಳ್ಳಿ ೩) ಆನೇಕಲ್ ೪) ಅತ್ತಿಬೆಲೆ ೫) ಸರ್ಜಾಪುರ ೬) ಮಾಲೂರು ೭) ಟೇಕಲ್ ೮) ಬಂಗಾರಪೇಟೆ ೯) ಕೆ.ಜಿ.ಎಫ್. ೧೦) ಕೋಲಾರ ೧೧) ಬೇತಮಂಗಲ ೧೨) ಮಿಳಬಾಗಿಲು.

೧೯೮೩ ದರಗಳನ್ವಯ ರೂ. ೧೦೦–೮೦ ಕೋಟಿಗಳ ರೇಖಾ ಅಂದಾಜು ಪಟ್ಟಿಯ ಪ್ರಸ್ತಾವನೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

೩) ನಿಜ (ರೇಖಾ ಅಂದಾಜು ಪಟ್ಟಿ).

೪) ೧೦೦–೦೨ ಕೋಟಿ ರೂಪಾಯಿಗಳು (ಈಗ ೨೦೦ ಕೋಟಿ ರೂಪಾಯಿಗಳು).

೫) ಈ ಪ್ರಸ್ತಾವನೆಯು ಸರ್ಕಾರದ ಗಣನೆಯಲ್ಲಿದೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ೧೨ ಪಟ್ಟಣಗಳೆಂದು ಹೇಳಿದ್ದೀರಿ. ಇದರಲ್ಲಿ ಹೊಸಕೋಟೆ ಬಿಟ್ಟು ಹೋಗಿದೆ. ಈ ಎಲ್ಲ ಪಟ್ಟಣಗಳಲ್ಲಿರತಕ್ಕ ಜನಸಂಖ್ಯೆ ಎಷ್ಟು ಎಂದು ಹೇಳುವುದಕ್ಕೆ ಸಾಧ್ಯವೇ ? ಈ ಎಲ್ಲ ಯೋಜನೆ ತಯಾರಾಗಿದ್ದು ಯಾವಾಗ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ೧೯೮೩ರಿಂದಲೂ ಈ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ, ಆದರೆ ಯಾವ ಹೆಜ್ಜೆಯನ್ನೂ ಈ ಬಗ್ಗೆ ಸರ್ಕಾರ ಇಟ್ಟಿಲ್ಲ.